ಶ್ರೀ ಜಗದೀಶ್ ಶೆಟ್ಟರ್ : ಸರ್ಕಾರ ಧೈರ್ಯ ಕೊಡುವಂತಹ ಒಂದು statement ಅನ್ನು ಮಾಡಬೇಕು.

(ಗೊಂದಲ)

ಶ್ರೀ ಆರ್. ಅಶೋಕ್: ಮೆಹದಿ ಎನ್ನುವವರನ್ನು ಈಗಾಗಲೇ ಬಂಧಿಸಿರುತ್ತಾರೆ. ಆತನನ್ನು ಬಂಧಿಸಿರುವ ಹಿನ್ನೆಲೆಯಲ್ಲಿ ಬೆಂಗಳೂರು Blast ಮಾಡುತ್ತೇವೆಂದು ಹೇಳಿದ್ದಾರೆ. ಈ ರೀತಿಯ ಘಟನೆ ಸಿಡ್ನಿಯಲ್ಲಿಯೂ ಸಹ ನಡೆದಿದೆ. ನಮ್ಮಲ್ಲೂ ಆ ರೀತಿ ಆಗಬಾರದೆಂಬ ಹಿನ್ನೆಲೆಯಲ್ಲಿ ಜನಗಳಿಗೆ ಒಂದು ಸಂದೇಶ ಹೋಗಬೇಕು. ಅಧಿವೇಶನ ನಡೆಯುತ್ತಿದ್ದು, ಈ ರೀತಿಯ ಘಟನೆ ಆಗಿರುವುದರಿಂದ ಬೆಂಗಳೂರಿನ ಜನರಿಗೆ ಭಯ ಬಂದಿದೆ. ಎಲ್ಲಾ ಮಾಧ್ಯಮದಲ್ಲಿ ವಿಷಯ ಪ್ರಸಾರವಾದ ಕಾರಣದಿಂದ ದಯಮಾಡಿ ಸರ್ಕಾರ ಒಂದು ಸ್ಟೇಟ್‌ಮೆಂಟ್ ಅನ್ನು ಮಾಡಲಿ.

ಅಧ್ಯಕ್ಷರು : ಸಾಕು, ಸಾಕು.

(ಗೊಂದಲ)

ಶ್ರೀ ಆರ್. ಅಶೋಕ್ : ಮಾನ್ಯ ಮುಖ್ಯಮಂತ್ರಿಗಳೇ ನನಗೇನು ಉತ್ತರ ಬೇಕಾಗಿಲ್ಲ. ಒಂದು ಸ್ಟೇಟ್‌ಮೆಂಟ್ ಮಾಡಿದರೆ ಸಾಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಗೃಹ ಸಚಿವರು ಕೊಡುತ್ತಾರೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ವಿವರವಾದ ಉತ್ತರವನ್ನು ತರಿಸಿ ಕೊಡಲಾಗುವುದು. ಸ್ಟೇಟ್‌ಮೆಂಟ್ ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು : ಆಯಿತು.

2. ವಿಷಯ : ಬಗರ್ ಹುಕುಂ ನಲ್ಲಿ ಇರತಕ್ಕ ರೈತರನ್ನು ಒಕ್ಕಲೆಬ್ಬಿಸುವ ಬಗ್ಗೆ.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) : ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ರೈತರನ್ನು ವಿನಾಕಾರಣ ಸರ್ಕಾರ ಅರೆಸ್ಟ್ ಮಾಡಿರುತ್ತದೆ.

(ಗೊಂದಲ)

ಅಧ್ಯಕ್ಷರು : ಸದನ ನಡೆಸಬೇಕೆ ಅಥವಾ ಬೇಡವೇ? ಪ್ರಶ್ನೋತ್ತರಗಳಿವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ವಿನಾಕಾರಣ ರೈತರನ್ನು ಅರೆಸ್ಟ್ ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು : ಆಯಿತು, ಬೇಗ ಹೇಳಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ : ಸರ್ಕಾರ ನಿನ್ನೆಯ ದಿವಸ ಕಬ್ಬು ಬೆಳೆಗಾರರನ್ನು ವಿನಾಕಾರಣ ಅರೆಸ್ಟ್ ಮಾಡಿದೆ...

(ಗೊಂದಲ)

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರೆ . . . . ನೀವೆಲ್ಲಾ ಈ ಪೀಠದಲ್ಲಿ ಕುಳಿತು ಕೆಲಸ ಮಾಡಿದಂತಹವರು.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ : ನಿನ್ನೆಯ ದಿವಸ ಅರೆಸ್ಟ್ ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು : ಆಯಿತು, ಈಗ ಏನ್ ಹೇಳಿ ಮಹಾರಾಯರೇ . . .

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ : ಕಬ್ಬು ಬೆಳೆಗಾರರನ್ನು ಅರೆಸ್ಟ್ ಮಾಡಿದ್ದಾರೆ. ದಯವಿಟ್ಟು ಸರ್ಕಾರ ಕಬ್ಬು ಬೆಳೆಗಾರರ ಮೇಲೆ, ರೈತರ ಮೇಲೆ ದಬ್ಬಾಳಿಕೆ ಮಾಡಬಾರದು, ಕೂಡಲೇ ಅವರನ್ನು ಬಿಡುಗಡೆ ಮಾಡಿ ಕೇಸ್ ವಾಪಸ್ಸು ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ರಮೇಶ್ ಬಂಡೀ ಸಿದ್ದೇಗೌಡ ಎ.ಬಿ. : ಅರಣ್ಯ ಭೂಮಿ ಬಗ್ಗೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಬಗರ್‌ಹುಕುಂನಲ್ಲಿ ಇರತಕ್ಕಂತಹ ರೈತರನ್ನು ಒಕ್ಕೆಲೆಬ್ಬಿಸಿರುವುದು. .....

(ಗೊಂದಲ)

ಅಧ್ಯಕ್ಷರು : ಈಗ ಬೇಡಿ. ಆಮೇಲೆ ಕೇಳಿ.

(ಗೊಂದಲ)

ಅಧ್ಯಕ್ಷರು : ಅದಕ್ಕೇನು ಮಾಡುವುದಕ್ಕಾಗುತ್ತದೆ. Please resume.

(ಗೊಂದಲ)

ಅಧ್ಯಕ್ಷರು : ಇದಾದ ಮೇಲೆ ಕೇಳಿ ಅವಕಾಶ ಕೊಡುತ್ತೇನೆ. ಅರಣ್ಯ ಭೂಮಿಗೆ ಸಂಬಂಧಪಟ್ಟಂತೆ ಇಂದು ಬೆಳಿಗ್ಗೆ ನನ್ನ ಕೊಠಡಿಯಲ್ಲಿ ಚರ್ಚೆ ಮಾಡಿದ್ದೇವೆ. ಆದ್ದರಿಂದ ಆ ವಿಷಯವಾಗಿ ಬೆಂಗಳೂರಿನಲ್ಲಿ ಒಂದು ಸಭೆ ಕರೆದು, ಪರಿಹಾರ ಮಾಡೋಣವೆಂದು ಮಾನ್ಯ ಅರಣ್ಯ ಸಚಿವರು ಮತ್ತು ಸಂಬಂಧಿಸಿದ ಎಲ್ಲರೂ ಬಂದು ಈ ಬಗ್ಗೆ ಚರ್ಚೆ ಮಾಡಿರುತ್ತೇವೆ. ಇದರ ಜೊತೆಗೆ ಕಂದಾಯ ಕಾನೂನು 79/2 ನಲ್ಲಿ privilege lands ಇದ್ದು, ಅದರ ವಿಚಾರದಲ್ಲಿ 50, 53 ರಲ್ಲಿ ಅರ್ಜಿಯನ್ನು ಯಾರು ನೀಡಿರುತ್ತಾರೋ ಅವರ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ಮಾನ್ಯ ಕಂದಾಯ ಸಚಿವರು, ಮಾನ್ಯ ಕಾನೂನು ಸಚಿವರೊಡನೆ ಚರ್ಚೆ ಮಾಡಿ ಬೆಂಗಳೂರಿನಲ್ಲಿ ಸಭೆ ಕರೆದು ತೀರ್ಮಾನ ಮಾಡಬೇಕೆಂದು ಇದ್ದೇವೆ.

ಶ್ರೀ ಎ.ಬಿ. ರಮೇಶ್ ಬಂಡಿ ಸಿದ್ದೇಗೌಡ : 144 ಸೆಕ್ಷನ್ ಪ್ರಕಾರ ಅಲ್ಲಿ ಖಾಲಿ ಮಾಡಿಸುವುದಕ್ಕೆ ಎಲ್ಲಾ ರೀತಿಯ ವ್ಯವಸ್ಥೆ ಮಾಡುತ್ತಿದ್ದಾರೆ.

ಅಧ್ಯಕ್ಷರು: ಸ್ವಲ್ಪ ಕೇಳಿ ಇಲ್ಲಿ ಹೇಳುತ್ತೇನೆ.

(ಗೊಂದಲ)

ಶ್ರೀ ಎ.ಬಿ. ರಮೇಶ್ ಬಂಡಿ ಸಿದ್ದೇಗೌಡ : ಅಲ್ಲಿರುವವರನ್ನು ಒಕ್ಕೆಲೆಬ್ಬಿಸುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ಏಕೆ ಈ ರೀತಿ ಮಾಡುತ್ತಿದ್ದೀರಿ. ಯಾರನ್ನು ಒಕ್ಕೆಲೆಬ್ಬಿಸುವುದಿಲ್ಲ. ಸುಮ್ಮನೆ ಮಾಡುವ ಕೆಲಸ ಮಾಡಿ. 50, 53ನೇ ಅರ್ಜಿ ಇರುವಂತಹ ಸಂದರ್ಭದಲ್ಲಿ ಒಕ್ಕೆಲೆಬ್ಬಿಸುವುದಕ್ಕಾಗುವುದಿಲ್ಲ. ಈಗಾಗಲೇ ಸರ್ಕಾರದಿಂದ ಒಂದು ಸಂದೇಶ ಹೋಗಿರುತ್ತದೆ. 50, 53ರಲ್ಲಿ ಅರ್ಜಿ pending ಇದ್ದು ಯಾರು ಒಕ್ಕೆಲೆಬ್ಬಿಸುತ್ತಿದ್ದಾರೆಂಬ ಬಗ್ಗೆ ಕಂದಾಯ ಇಲಾಖೆಯ ಗಮನಕ್ಕೆ ತನ್ನಿ ನಿಲ್ಲಿಸುತ್ತೇವೆ.

ಎರಡನೇಯದಾಗಿ ಅರಣ್ಯಕ್ಕೆ ಸಂಬಂಧಿಸಿದಂತೆ ತಮಗೆ ಎಲ್ಲರಿಗೂ ಒಂದು ಪತ್ರ ಬರೆದಿದ್ದೇನೆ. ಎಲ್ಲೆಲ್ಲಿ ಅರಣ್ಯ ಗ್ರಾಮ ಹಕ್ಕು ಸಮಿತಿ ರಚನೆಯಾಗಿರುವುದಿಲ್ಲ ಅಲ್ಲಿ ಗ್ರಾಮ ರಚನೆ ಮಾಡಿ ಮತ್ತು ಮಾಡಿಸಿಕೊಳ್ಳಿ. ಆ ರೀತಿ ರಚನೆ ಮಾಡಿದ ನಂತರ ಅರ್ಜಿಯನ್ನು ಕೊಡಿ. ಅರ್ಜಿ ಕೊಟ್ಟ ನಂತರ endorsement ಇಟ್ಟುಕೊಂಡರೆ, ಹಾವಿಗೆ . . . ಹಿಡಿದ ಹಾಗೆ ಇರುತ್ತದೆ. ಆ ರೀತಿ ಕಾನೂನು ಇದೆ. ಈ ಬಗ್ಗೆ ನಾನೇನು ಹೇಳುತ್ತಿಲ್ಲ. ಅಂತಿಮವಾಗಿ ತೀರ್ಮಾನ ಮಾಡುವವರೆಗೂ ಯಾರನ್ನು ಒಕ್ಕೆಲೆಬ್ಬಿಸುವುದಿಲ್ಲವೆಂಬ ಕಾನೂನಿದೆ.

ಶ್ರೀ ಜಗದೀಶ್ ಶೆಟ್ಟರ್(ಮಾನ್ಯ ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ತಾವು ಹೇಳುವುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಕಲಘಟಗಿಯ ಉದಾಹರಣೆ ಕೊಡುತ್ತೇನೆ. ಕಳೆದ 15 ವರ್ಷಗಳ ಹಿಂದೆ eviction ಮಾಡಿದ್ದಾರೆ. 50, 53. . .

ಅಧ್ಯಕ್ಷರು : ಯಾರು ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಅಲ್ಲಿನ ಅಧಿಕಾರಿಗಳಾದ ಡಿ.ಸಿ.

ಅಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್ ರವರೆ ಒಂದು ಕೆಲಸ ಮಾಡಿ. ಯಾರನ್ನು eviction ಮಾಡಿದರಲ್ಲ. . . .

ಶ್ರೀ ಜಗದೀಶ್ ಶೆಟ್ಟರ್ : eviction ಮಾಡಿದ್ದಾರೆ.

ಶ್ರೀ ಎ.ಬಿ. ರಮೇಶ್ ಬಂಡಿ ಸಿದ್ದೇಗೌಡ : ಮಾನ್ಯ ಅಧ್ಯಕ್ಷರೆ, ಈಗ ಮಾಡುತ್ತಿದ್ದಾರೆ. 144 ಸೆಕ್ಷನ್ ಜಾರಿಯಾಗಿದೆ.

ಅಧ್ಯಕ್ಷರು : ಯಾರು eviction ಮಾಡುತ್ತಾರೆಂದು ನಾನು ನೋಡುತ್ತೇನೆ. ಒಂದೇ ಒಂದು ..

ಶ್ರೀ ಎ.ಬಿ. ರಮೇಶ್ ಬಂಡಿ ಸಿದ್ದೇಗೌಡ : ಮಾನ್ಯ ಅಧ್ಯಕ್ಷರೆ, ಜಾರಿ ಮಾಡಿದ್ದಾರೆ.

ಅಧ್ಯಕ್ಷರು : ಸಮಾಧಾನವಾಗಿ ಕೇಳ್ರಿ, ಗ್ರಾಮ ಅರಣ್ಯ ಹಕ್ಕು ಸಮಿತಿಗೆ ಅರ್ಜಿ ಕೊಡಬೇಕು. endorsment ಇಟ್ಟುಕೊಳ್ಳಬೇಕು. endorsment ಇಟ್ಟುಕೊಂಡ ಮನುಷ್ಯನನ್ನು eviction ಮಾಡಿದ್ದರೆ ಹೇಳ್ರಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ತಾವು ಹೇಳುತ್ತಿರುವುದು ಸರಿಯಿದೆ. ಅದಕ್ಕೆ ಪ್ರಾಮುಖ್ಯತೆ ಇರುವುದರಿಂದ ಅವಕಾಶ ಕೊಡಿ ಎಂದು ಕೇಳುತ್ತಿದ್ದೇವೆ.

ಅಧ್ಯಕ್ಷರು : ಮಾನ್ಯ ಕುಮಾರಸ್ವಾಮಿಯವರೆ, ಅವಕಾಶ ಕೊಡುತ್ತೇನೆ. ಆದರೆ, ಈಗ ಬೇಡ. ಮೊದಲು ಪ್ರಶ್ನೋತ್ತರ ಆಗಲಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ನಾಳೆಗೆ ಚರ್ಚೆಗೆ ತೆಗೆದುಕೊಳ್ಳಿ.

ಅಧ್ಯಕ್ಷರು : ಆಮೇಲೆ ಅವಕಾಶ ಕೊಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಪಶು ಸಂಗೋಪನಾ ಸಚಿವರು) : ಮಾನ್ಯ ಅಧ್ಯಕ್ಷರೆ, ಯಾವ ರೂಪದಲ್ಲಿ ಬೇಕಾದರೂ ಚರ್ಚೆ ಮಾಡಲಿ. ತಾವು ಹೇಳಿದ ರೀತಿಯಲ್ಲಿ ಈಗಾಗಲೇ 50,53 ರ ಅರ್ಜಿಯಲ್ಲಿ ಪೆಂಡಿಂಗ್ ಇದೆಯೋ ಪಾರಂಪರಿಕ

ಅರಣ್ಯ ಕಾಯಿದೆ ಅಡಿಯಲ್ಲಿ ಅರ್ಜಿಗಳು ಪೆಂಡಿಂಗ್ ಇದೆಯೋ ಅಲ್ಲಿ ಖಿಲ್ಲಾ ಮಾಡಿಸುವುದಿಲ್ಲ ಎನ್ನತಕ್ಕಂಥದ್ದನ್ನು ನಾವು ಸಾರಿ ಸಾರಿ ಹೇಳಿದ್ದೇವೆ. ಖಿಲ್ಲಾ ಮಾಡಿಸುವ ಪ್ರಶ್ನೆ ಇಲ್ಲ. ಅಂಥ ಪ್ರಕರಣಗಳು ಬಂದಾಗ ಯಾರು ಬೇಕಾದರೂ ನಮ್ಮ ಗಮನಕ್ಕೆ ತರಬಹುದು.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಪ್ರಾಮುಖ್ಯತೆ ಇರುವುದರಿಂದ ಅವಕಾಶ ಮಾಡಿಕೊಡಿ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಅರ್ಜಿಗಳು ಪೆಂಡಿಂಗ್ ಇದ್ದಾಗ ಖಿಲ್ಲಾ ಮಾಡಿಸುವುದಕ್ಕೆ ಬರುವುದಿಲ್ಲ. ಖಿಲ್ಲಾ ಮಾಡಿಸುವುದಿಲ್ಲ.

ಅಧ್ಯಕ್ಷರು : ಮಾನ್ಯ ಕುಮಾರಸ್ವಾಮಿಯವರೆ, ಈ ವಿಚಾರದಲ್ಲಿ ನಾಳೆ ವಿಶೇಷವಾದಂಥ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಅವರ ಕೇಸ್ ನನಗೆ ಗೊತ್ತಿದೆ. ನೇರವಾಗಿ ಕೊಡಿ.

ಶ್ರೀ ಹೆಚ್.ಕೆ .ಕುಮಾರಸ್ವಾಮಿ : ಸಕಲೇಶಪುರದಲ್ಲಿ ಕ್ಯಾನಳ್ಳಿ ಎಂಬ ಒಂದು ಊರು. ಉದಾಹರಣೆಗೆ ಹೇಳಿದೆ. ಅನೇಕ ಹಳ್ಳಿಗಳಿವೆ. ಕೆಲವು ಹಳ್ಳಿಗಳನ್ನು ಹೇಳಿದೆ ಅಷ್ಟೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಕುಮಾರಸ್ವಾಮಿಯವರೆ, ತಾವು ಹೇಳಿದ್ದನ್ನು ನಾನು ಒಪ್ಪಿಕೊಂಡೆ. ಅಲ್ಲಿ ಅರ್ಜಿಗಳು dispose ಆಗಿದ್ದರೆ ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೋಸ್ಕರ ಅದನ್ನು ನಮಗೆ ನೇರವಾಗಿ ಕೊಡಿ.

ಅಧ್ಯಕ್ಷರು : ಮಾನ್ಯ ಸಚಿವರೆ, ನೀವು ಏನು ಹೇಳಿದ್ದೀರಿ. ಒಂದು ಸುತ್ತೋಲೆ ಕಳುಹಿಸಿ. ಯಾರ್ಯಾರು 50, 53 . . .

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಾವು ಈಗಾಗಲೇ ಸುತ್ತೋಲೆಯನ್ನು ಕಳುಹಿಸಿದ್ದೇವೆ.

ಅಧ್ಯಕ್ಷರು : very good.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸಚಿವರೆ, ತಾವು ಸುತ್ತೋಲೆಯನ್ನು ಕಳುಹಿಸಿದ್ದೇವೆಂದು ಹೇಳಿದ್ದೀರಿ. ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಮೊನ್ನೆ ಕಲಘಟಗಿಯಲ್ಲಿ ಈ ರೀತಿ ಎಲ್ಲಾ ಇದ್ದಂಥ ಸಂದರ್ಭದಲ್ಲಿ eviction ಮಾಡಿದ್ದಾರೆ. ಅಲ್ಲಿನ್ ಡಿ.ಸಿ ಮಾಡಿದ್ದಾರೆ. ಅದನ್ನು ನಾನು ಉದಾಹರಣೆ ಸಮೇತ ಕೊಡುತ್ತೇನೆ. ತಾವು, ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರೊ ತೆಗೆದುಕೊಳ್ಳಿ.

ಶ್ರೀ ಟಿ.ಬಿ. ಜಯಚಂದ್ರ: ಆಯಿತು. ಕೊಡಿ.

ಅಧ್ಯಕ್ಷರು: ಮಾನ್ಯ ಜಗದೀಶ್ ಶೆಟ್ಟರ್ ರವರೆ, ತಾವು ಹೇಳಿದ್ದೀರಲ್ಲಾ ಅದು ಕಂದಾಯ ಜಮೀನೋ, ಅರಣ್ಯ ಜಮೀನೋ ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಅದು ಅರಣ್ಯ ಜಮೀನು.

ಅಧ್ಯಕ್ಷರು : Very good. ಅವರು ಅರ್ಜಿ ಕೊಟ್ಟಿದ್ದಾರಾ ?

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಕೊಟ್ಟಿದ್ದಾರೆ.

ಅಧ್ಯಕ್ಷರು: ಹಾಗಾದರೆ, ಒಂದು ಕೆಲಸ ಮಾಡೋಣ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ನಾನು ಅದರ ಎಲ್ಲಾ ಮಾಹಿತಿಯನ್ನು ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು: ತಾವು ಅದನ್ನು ನಾಳೆ ಎತ್ತಿ. ಯಾರು ಅರ್ಜಿ ಕೊಟ್ಟಂಥವರನ್ನು ಯಾರು eviction ಮಾಡಿದ್ದಾರೆ, ನೀವು details ತೆಗೆದುಕೊಳ್ಳಿ. ಅವರಿಗೆ ಇಲ್ಲಿ ಏನು ಹಗ್ಗ ಹಾಕಬೇಕು ಹಾಕೋಣ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾನು details ಕೊಡುತ್ತೇನೆ. ನಮಗೂ ಸಹಾಯ ಮಾಡಿ. ಸಕಲೇಶ್ವರ ತಾಲ್ಲೂಕಿನದ್ದು ನಾನು ಕೊಡುತ್ತೇನೆ.

ಅಧ್ಯಕ್ಷರು : ನಮ್ಮ ಅಧಿಕಾರಿಗಳಿಗೆ ಅವರದೇ ಆದಂಥ ಸಾಮ್ರಾಜ್ಯ ಇದೆಯೆಂದು ತಿಳಿದುಕೊಂಡಿದ್ದಾರೆ. ಇಲ್ಲಿ ಒಂದು ಸರ್ಕಾರ ಇದೆ, ಕಾನೂನು ಇದೆ ಎನ್ನುವುದನ್ನು ಮರೆತಿದ್ದಾರೆ. ಅದನ್ನು ತಿಳಿಸತಕ್ಕಂಥ ಕೆಲಸ ನಾಳೆ ಕುಳಿತುಕೊಂಡು ಮಾಡೋಣ. ಇವತ್ತು ಇದನ್ನು ಪೂರೈಸಿಕೊಳ್ಳೋಣ. ಆಯಿತು, ಖಂಡಿತ ಮಾಡೋಣ. ಈಗ ಪ್ರಶ್ನೋತ್ತರ. ಶ್ರೀಮಾನ್ ರಮೇಶ್ ಕುಮಾರ್.

3. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಬಹುಮಹಡಿಗಳ ವಸತಿ ಸಂಕೀರ್ಣ

76(2043) **ಶ್ರೀ ಕೆ.ಆರ್. ರಮೇಶ್ ಕುಮಾರ್:–** ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬಹುಮಹಡಿಗಳ ವಸತಿ ಸಂಕೀರ್ಣ (Residential Apartment) ನಿರ್ಮಿಸಲು ಯಾವ ಸಂಸ್ಥೆಗಳಿಂದ ಅವಶ್ಯ ಅನುಮತಿಯನ್ನು ಪಡೆಯಬೇಕಾಗಿರುತ್ತದೆ;

(ಆ) ಕಳೆದ ಐದು ವರ್ಷಗಳಿಂದ ಅವಶ್ಯ ಅನುಮತಿ ಪಡೆದು ನಿರ್ಮಿಸಿರುವ ಬಹುಮಹಡಿ ವಸತಿ ಸಂಕೀರ್ಣಗಳ ಸಂಖ್ಯೆ ಎಷ್ಟು ; (ಬಹುಮಹಡಿ ಕಟ್ಟಡಗಳು ಯಾರ ಮಾಲೀಕತ್ವ ಕಂಪನಿಗಳ ಒಡೆತನಕ್ಕೆ ಸೇರಿದೆ ಎಂಬ ವಿವರ ನೀಡುವುದು;